ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: 13 ಗೃಹ - ಸಿ.ಡಿ. ಪ್ರಕರಣ

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 18/3/21

## ಸಿಡಿ ಬಹಿರಂಗಕ್ಕೆ 15 ದಿನ- ಎಸ್‌ಐಟಿ ರಚನೆಗೆ 8 ದಿನ- ಫಲಿತಾಂಶ ಶೂನ್ಯ

# ಎತ್ತ ಸಾಗುತಿದೆ ಎಸ್‌ಐಟಿ ಶಿಕಾರಿ

ಸಂ.ಕ.ಸಮಾಚಾರ ಬೆಂಗಳೂರು 18/3/21

ಬಿಜೆಪಿ ಸರ್ಕಾರಕ್ಕೆ ಭಾರಿ ಮುಜುಗರ ಉಂಟು ಮಾಡಿ ದೇಶಾದ್ಯಂತ ಸದ್ದು ಮಾಡುತ್ತಿರುವ ಮಾಜಿ ಸಚಿವ ರಮೇಶ್ ಜಾರಕಿಹೊಳಿ ವಿರುದ್ಧದ ಸಿ.ಡಿ. ಬಹಿರಂಗಗೊಂಡು 15 ದಿನಗಳೇ ಉರುಳಿದರೂ ಪ್ರಕರಣವನ್ನು ಭೇದಿಸಲು ರಾಜ್ಯದ ಪೊಲೀಸರಿಗೆ ಈ ತನಕ ಸಾಧ್ಯವಾಗಿಲ್ಲ. ಅಷ್ಟೇ ಅಲ್ಲ, ಹಗರಣದ ತನಿಖೆಗೆಂದೇ ವಿಶೇಷ ತನಿಖಾದಳ ರಚನೆಯಾಗಿ ಎಂಟು ದಿನಗಳೇ ಉರುಳಿದರೂ ಕೇವಲ ವಿಚಾರಣೆ ಹಾಗೂ ದಾಳಿಗಳಲ್ಲೇ ಕಾಲ ಕಳೆಯುತ್ತಿರುವ ಪೊಲೀಸರು ಈ ತನಕ ಒಬ್ಬನೇ ಒಬ್ಬ ವ್ಯಕ್ತಿಯನ್ನೂ ಬಂಧಿಸಲು ಸಾಧ್ಯವಾಗಿಲ್ಲ. ಹೀಗಾಗಿ ಸರ್ಕಾರ ಎಸ್‌ಐಟಿಯನ್ನು ನಿಯಂತ್ರಿಸುತ್ತಿದೆಯೇ ಎಂಬ ಬಲವಾದ ಶಂಕೆ ವ್ಯಕ್ತವಾಗಿದೆ.



1 ದೂರು

2 ಎಫ್‌ಐಆರ್

5 ದಾಳಿ

6 ಜನ ವಿಚಾರಣೆ

0 ಬಂಧನ

- ಬೆಳಗಾವಿ ಎಫ್‌ಐಆರ್ ತನಿಖೆಗೆ ಪ್ರತ್ಯೇಕ ತಂಡ ರಚನೆ
- ಎಸ್‌ಐಟಿಗೆ ವರ್ಗಾಯಿಸದಂತೆ ಪ್ರಭಾವಿಗಳ ಒತ್ತಡ ಶಂಕೆ
- ಒಂದೇ ಪ್ರಕರಣದಲ್ಲಿ ಪ್ರತ್ಯೇಕ ಎರಡು ತನಿಖೆ ಆರಂಭ
- ಪೊಲೀಸರ ನೈತಿಕ ಸ್ಥೈರ್ಯಕ್ಕೆ ಪೆಟ್ಟು ನೀಡಿದ ತೀರ್ಮಾನ

ರಾಸಲೀಲೆ ಹಗರಣದ ಸಿಡಿ ತನಿಖೆಗೆ ಸಂಬಂಧಿಸಿದಂತೆ ಈ ತನಕ ರಾಜ್ಯದ ಬೇರೆ ಬೇರೆ ಮೂರು ಪೊಲೀಸ್ ಠಾಣೆಗಳಲ್ಲಿ ಪ್ರತ್ಯೇಕ ದೂರುಗಳಿದ್ದರೂ ಎರಡು ಪ್ರಕರಣದಲ್ಲಿ ತತ್‌ಕ್ಷಣವೇ ಎಫ್‌ಐಆರ್ ದಾಖಲಿಸಿ, ಇಡೀ ಪ್ರಕರಣದ ಮೂಲ ದೂರಿನ ಬಗೆಗೆ ಈತವಕ ಎಫ್‌ಐಆರ್ ದಾಖಲಾಗಿಲ್ಲ ಎಂಬುದು ಗಮನಾರ್ಹ ಸಂಗತಿ. ಇಷ್ಟೆಲ್ಲ ಬೆಳವಣಿಗೆಗಳ ಮಧ್ಯೆ ಸಿಡಿಯಲ್ಲಿ ಇದ್ದಾಳೆ ಎನ್ನಲಾದ ಯುವತಿಯ ಪೋಷಕರು ಬೆಳಗಾವಿಯ ಎಪಿಎಂಸಿ ಠಾಣೆಗೆ ನೀಡಿರುವ ದೂರಿನ ಆಧಾರದ ಮೇಲೆ ದಾಖಲಾದ ಎಫ್‌ಐಆರ್ ಎಸ್‌ಐಟಿಗೆ ವರ್ಗಾವಣೆಯಾಗದೇ ಬೆಳಗಾವಿ ಪೊಲೀಸರೇ ಪ್ರತ್ಯೇಕ ತಂಡ ರಚನೆ ಮಾಡಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ. ಅಷ್ಟೇ ಅಲ್ಲ, ಬೆಳಗಾವಿ ಎಫ್‌ಐಆರ್ ಯಾವ ಕಾರಣಕ್ಕೂ ಎಸ್‌ಐಟಿಗೆ ಹಸ್ತಾಂತರಿಸುವುದು ಬೇಡವೆಂದು ಸರ್ಕಾರದ ಮೇಲೆ ಪ್ರಭಾವಿಗಳು ಒತ್ತಡ ಹೇರಿದ್ದಾರೆ ಎಂಬ ಗುಮಾನಿ ಸಹ ಕೇಳಿಬರುತ್ತಿದೆ. ಎತ್ತು ಏರಿಗೆ ಎಳೆದರೆ ಕೋಣ ನೀರಿಗೆ ಎಳೆಯಿತು ಎಂಬಂತೆ ಪೊಲೀಸ್ ಇಲಾಖೆಯಲ್ಲೇ ತನಿಖೆಯ ಬಗೆಗೆ ಸಮನ್ವಯದ ಶಂಕೆ ಬೆಳಗಾವಿ ಎಫ್‌ಐಆರ್ ದಾಖಲಿಸಿದ ಬಳಿಕ ಉದ್ಭವಿಸಿದೆ. ಬೆಂಗಳೂರಿನ ಸದಾಶಿವನಗರ ಠಾಣೆಯಲ್ಲಿ ಮಾಜಿ ಸಚಿವ ರಮೇಶ್ ಜಾರಕಿಹೊಳಿ ದೂರು ದಾಖಲಾದ 12 ಗಂಟೆಗಳಲ್ಲೇ ಎಸ್‌ಐಟಿಗೆ ವರ್ಗಾಯಿಸಲಾಗಿತ್ತು. ಆದರೆ ಬೆಳಗಾವಿಯಲ್ಲಿ ಸಂತ್ರಸ್ತೆಯ ಪೋಷಕರು ನೀಡಿರುವ ಅಪಹರಣ ಪ್ರಕರಣದ ದೂರನ್ನು ಕೂಡ ಎಸ್‌ಐಟಿಗೆ ವರ್ಗಾವಣೆ ಮಾಡಬೇಕಿತ್ತು.




→ 7

# ಎತ್ತ ಸಾಗಿದೆ ಎಸ್‌ಐಟಿ ಶಿಕಾರಿ

ಉದಯವಾಣಿ ಪ್ರತಿನಿಧಿ

ಆದರೆ ಎಫ್‌ಐಆರ್ ದಾಖಲಾದ 12 ಗಂಟೆಗಳಲ್ಲೇ ಅದರ ತನಿಖೆಗೆ ಪ್ರತ್ಯೇಕ ತಂಡ ರಚನೆ ಮಾಡುವ ಮೂಲಕ ಎಸ್‌ಐಟಿಯ ಕಾರ್ಯವ್ಯಾಪ್ತಿಯನ್ನು ಸರ್ಕಾರ ಸೀಮಿತಗೊಳಿಸಿದೆ ಎಂಬ ಮಾತು ಪೊಲೀಸ್ ಇಲಾಖೆಯಲ್ಲೇ ಕೇಳಿಬರುತ್ತಿದೆ. ಇದು ಎಸ್‌ಐಟಿ ಅಧಿಕಾರಿಗಳ ನೈತಿಕ ಸ್ಥೈರ್ಯ ಕುಸಿಯಲು ಕಾರಣವಾಗಿದೆ. ಈ ನಡುವೆ ಬೆಳಗಾವಿಯಲ್ಲಿ ಯುವತಿ ಪೋಷಕರು ನೀಡಿದ ದೂರಿನ ತನಿಖೆಗೆ ಪ್ರತ್ಯೇಕ ತಂಡ ರಚನೆ ಮಾಡಿದ್ದಾಗಿ ಡಿಸಿಪಿ ವಿಕ್ರಮ್ ಆಮಟೆ ಪ್ರಕಟಿಸಿದ್ದಾರೆ. ಇತ್ತ ಬೆಂಗಳೂರಿನಲ್ಲಿ ಸಿಡಿ ಹಗರಣದ ತನಿಖೆ ನಡೆಸುತ್ತಿರುವ ಎಸ್‌ಐಟಿ ಪೊಲೀಸರು ಪ್ರಕರಣದ ಪ್ರಮುಖ ಆರೋಪಿ ಎನ್ನಲಾದ ಯುವ ಪತ್ರಕರ್ತ ನರೇಶ್‌ನ ಬೆಂಗಳೂರು ನಿವಾಸದ ಮೇಲೆ ದಾಳಿ ನಡೆಸಿದ್ದಾರೆ.

ಬುಧವಾರವಷ್ಟೇ ವಶಕ್ಕೆ ಪಡೆದಿರುವ ನರೇಶ್ ಜತೆ ಸಂಪರ್ಕ ಹೊಂದಿದ್ದರು ಎನ್ನಲಾದ ಮತ್ತೊಬ್ಬ ಯುವ ಪತ್ರಕರ್ತ ಅರುಣ್. ಹಾಗೂ ಆತನ ಇಬ್ಬರು ಸಹಚರರಾದ ಮಾರುತಿ ಮತ್ತು ಮಣಿಕಂಠ ಎಂಬುವವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ. ಬಳಿಕ ಲಗ್ಗೆರೆಯಲ್ಲಿರುವ ಮಾರುತಿ ನಿವಾಸದ ಮೇಲೂ ದಾಳಿ ನಡೆಸಿದ್ದಾರೆ. ವಶಕ್ಕೆ ಪಡೆದ ಬಳಿಕ ಮಾರುತಿ ಬಳಿ ಮತ್ತಷ್ಟು ಸ್ಟಿಂಗ್ ಆಪರೇಶನ್ ಸಿಡಿಗಳು ಪತ್ತೆಯಾಗಿವೆ ಎಂದು ಹೇಳಲಾಗಿದೆ.

**ಯುವತಿಗೆ ಮೂರನೇ ನೋಟಿಸ್:** ವಿವಾದಿತ ಸಿಡಿಯಲ್ಲಿ ಇದ್ದಾಳೆ ಎನ್ನಲಾದ ಯುವತಿಗೆ ಈಗಾಗಲೇ ಆಕೆಯ ಪೋಷಕರ ಮೂಲ ಸ್ಥಳವಾದ ವಿಜಯಪುರ ಜಿಲ್ಲೆಯ ನಿಡಗುಂದಿ ನಿವಾಸಕ್ಕೆ ನೋಟಿಸ್ ರವಾನಿಸಿದ್ದ ಎಸ್‌ಐಟಿ, ಆಕೆಯಿಂದ ಯಾವುದೇ ಪ್ರತಿಕ್ರಿಯೆ ಬಾರದೇ ಇ-ಮೇಲ್ ಮೂಲಕವೂ ಎರಡನೇ ನೋಟಿಸ್ ನೀಡಿದ್ದರು. ಇದೀಗ ಆಕೆಯಿಂದ ಈತನಕ ಯಾವುದೇ ಪ್ರತಿಕ್ರಿಯೆ ಸಿಗದ ಹಿನ್ನೆಲೆಯಲ್ಲಿ ಮೂರನೇ ಬಾರಿ ಇ-ಮೇಲ್ ಮೂಲಕವೇ ನೋಟಿಸ್ ರವಾನಿಸಿದ್ದಾರೆ.

**ಮತ್ತಷ್ಟು ಶಂಕಿತ ಪತ್ರಕರ್ತರ ಪಾತ್ರ ಬಯಲಿಗೆ:** ಮಾಜಿ ಸಚಿವರ ಸಿಡಿ ಹಗರಣ ಬೆನ್ನು ಬಿದ್ದಿರುವ ಎಸ್‌ಐಟಿ ಪೊಲೀಸರು ಶಂಕಿತರ ವಿಚಾರಣೆಯಿಂದ ಹೊರಬಿದ್ದ ಸ್ಫೋಟಕ ಮಾಹಿತಿಯಿಂದ ಬೆಚ್ಚಿಬಿದ್ದಿದ್ದಾರೆ. ಬುಧವಾರ ಬೆಳಗ್ಗೆ ಎಸ್‌ಐಟಿ ಮುಖ್ಯಸ್ಥ ಸೌಮೇಂದು ಮುಖರ್ಜಿ ನೇತೃತ್ವದಲ್ಲಿ ನಡೆದ ಅಧಿಕಾರಿಗಳ ಸಭೆಯಲ್ಲಿ ಈ ಬಗ್ಗೆ ಸುದೀರ್ಘ ಚರ್ಚೆ ನಡೆದಿದೆ. ಈ ತನಕ ನಡೆದಿರುವ ವಿಚಾರಣೆಯಲ್ಲಿ ಶಂಕಿತರು ನೀಡಿರುವ ಮಾಹಿತಿ ಇಡೀ ಪೊಲೀಸ್ ಇಲಾಖೆಯನ್ನೇ ದಂಗು ಬಡಿಸಿದೆ. ಮೂಲಗಳ ಪ್ರಕಾರ, ಹಾಲಿ ಸಚಿವ ಸಂಪುಟದಲ್ಲಿರುವ ಇಬ್ಬರು ಸಚಿವರ ಭ್ರಷ್ಟಾಚಾರದ ಬಗೆಗೂ ಸ್ಟಿಂಗ್ ಆಪರೇಶನ್ ಮಾಡಿದ್ದ ಫೂಟೇಜ್‌ಗಳು ದಾಳಿ ವೇಳೆ ಪತ್ತೆಯಾಗಿವೆ ಎನ್ನಲಾಗುತ್ತಿದೆ.

ಹಾಲಿ ಸಚಿವರೊಬ್ಬರ ಪತ್ನಿ ಹಿಂದೆ ಮತ್ತೊಂದು ಸರ್ಕಾರದಲ್ಲಿ ಸಚಿವರಾಗಿದ್ದಾಗ ಹಣ ಪಡೆದ ಬಗೆಗೆ ದೃಶ್ಯಾವಳಿಗಳು ಹಾಗೂ ಮತ್ತೊಬ್ಬ ಹಾಲಿ ಸಚಿವರು ಟೆಂಡರ್‌ಗೆ ಸಂಬಂಧಿಸಿದಂತೆ ಖುದ್ದಾಗಿ ಹಣ ಪಡೆದ ವಿಡಿಯೋ ಕೂಡ ಇದೆ ಎನ್ನಲಾಗುತ್ತಿದೆ. ಇಬ್ಬರು ಸಚಿವರಲ್ಲದೇ ಸರ್ಕಾರದ ಪ್ರಭಾವಿ ಅಧಿಕಾರಿಗಳು, ಕರ್ನಾಟಕದ ನೆಲ-ಜಲದ ಬಗೆಗೆ ಹೋರಾಟ ಮಾಡುವ ನಾಯಕನೊಬ್ಬರ ವಿಡಿಯೋ ಕೂಡ ಇದೆ ಎನ್ನುತ್ತಿವೆ ಮೂಲಗಳು. ವಿಚಿತ್ರವೆಂದರೆ, ಈ ಎಲ್ಲ ವಿಡಿಯೋಗಳನ್ನು ಮುಂದಿಟ್ಟುಕೊಂಡು ಕೆಲ ಯುವ ಪತ್ರಕರ್ತರು ಸಚಿವರಿಂದ, ಅಧಿಕಾರಿಗಳಿಂದ ಹಣ ವಸೂಲಿ ಮಾಡಿದ್ದಾರೆ. ಈಗಾಗಲೇ ಕೆಲವು ಪತ್ರಕರ್ತರನ್ನು ಕೆಲಸದಿಂದ ತೆಗೆದು ಹಾಕಿದ್ದರೂ ಮತ್ತೆ ಆಯಕಟ್ಟಿನ ಸ್ಥಳಗಳಲ್ಲಿ ಪತ್ರಕರ್ತರು ಬೇರುಬಿಟ್ಟಿದ್ದಾರೆ ಎಂದೂ ಹೇಳಲಾಗುತ್ತಿದೆ. ಹೀಗಾಗಿ ಎಸ್‌ಐಟಿ ತನಿಖೆ ಯಾವ ದೃಷ್ಟಿಕೋನದಲ್ಲಿ ಮುಂದುವರಿಸಬೇಕೆಂಬುದು ಅಧಿಕಾರಿಗಳನ್ನು ಪೇಚಿಗೆ ಸಿಲುಕಿಸಿದೆ.